# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 177 |
| ವಿಧಾನ ಪರಿಷತ್ತು ಸದಸ್ಯರು | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 14.02.2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದಿಂದ ಭೂಮಂಜೂರಾತಿ ಯಾಗಿರುವ ಪ್ರಕರಣಗಳು (ಗೋಮಾಳ ಸರ್ವೆ ನಂಬರುಗಳು) ರೈತರು ಸಲ್ಲಿಸಿರುವ ಅರ್ಜಿಗಳ ದುರಸ್ತಿಯಾಗದೇ ಬಾಕಿ ಇರುವ ಪ್ರಕರಣಗಳ ಬಗ್ಗೆ ಸರ್ಕಾರದ ಕ್ರಮವೇನು; | **ಭೂಮಂಜೂರಿ(ದರಖಾಸ್ತು) ಪೋಡಿ ಪ್ರಕರಣಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳು**<br>1) ಕೆಲವು ತುರ್ತು ಮತ್ತು ವಿಶೇಷ ಸಂದರ್ಭಗಳಲ್ಲಿ ನಿಯಮಾನುಸಾರ ನಮೂನೆ 1 ರಿಂದ 5 ಭರ್ತಿ ಮಾಡಿ, ಧೃಡೀಕರಿಸಿ, ಕೇವಲ ಅರ್ಜಿದಾರರ ಮಂಜೂರಿಯ ನೈಜತೆಯನ್ನು ಪರಿಶೀಲಿಸಿ, ಏಕವ್ಯಕ್ತಿಗೆ ಪೋಡಿ ಮಾಡಲು ಅದೇಶಿಸುವ ಅಧಿಕಾರವನ್ನು ಸಂಬಂಧಿಸಿದ ತಹಶೀಲ್ದಾರ ರಿಗೆ ಪ್ರತ್ಯಾಯೋಜಿಸಿ ಆದೇಶಿಸಿದೆ<br>2) ಮೂಲ ಮಂಜೂರಿ ಕಡತ ಲಭ್ಯವಿಲ್ಲದ ಪ್ರಕರಣಗಳಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಗೈರು ವಿಲೇ ಕಡತ ಪುನರ್ ನಿರ್ಮಾಣದ ಸಮಿತಿಯಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.<br>3) ಕಂದಾಯ ಇಲಾಖೆಯಿಂದ ಸರ್ಕಾರಿ ಜಮೀನುಗಳ ಪಹಣಿ ಒಟ್ಟುಗೂಡಿಸಿ ತಿದ್ದುಪಡಿ ಮಾಡುವ ಬಗ್ಗೆ ಕಂದಾಯ ಅದಾಲತ್‌ಗಳನ್ನು ನಡೆಸಲಾಗುತ್ತಿದೆ.<br>4) ಕಂದಾಯ ಇಲಾಖೆಯ ಅಭಿಲೇಖಾಲಯದ ಎಲ್ಲಾ ಮಂಜೂರಿ ಸಂಬಂಧಿಸಿದ ಕಡತಗಳನ್ನು Cataloging and Indexing ಮಾಡಲು ಕ್ರಮ ವಹಿಸಲಾಗುತ್ತಿದೆ.<br>5) ಪಹಣಿಯಲ್ಲಿನ ಮಾಲಿಕರ ಹೆಸರು/ಪೌತಿ ಖಾತೆ, ಇತ್ಯಾದಿಗಳ ಕುರಿತಂತೆ ತಿದ್ದುಪಡಿ ಮಾಡುವ ಸಂಬಂಧ ಕಂದಾಯ ಇಲಾಖೆ ಯಿಂದ ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ.<br>6) ನಮೂನೆ 1 ರಿಂದ 5 ಗಳನ್ನು ಡಿಜಿಟೈಸ್ಡ್ ಮಾಡಿ ನೇರವಾಗಿ ಮೋಜಿಣಿ ತಂತ್ರಾಂಶ ಮುಖಾಂತರ ಅಳತೆ ಮಾಡಿ ನಮೂನೆ 6 ರಿಂದ 10 ಗಳನ್ನು ತಯಾರಿಸುವುದನ್ನು ಅಂದೋಲನ ರೂಪದಲ್ಲಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>7) ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>8) ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>ಇದರಿಂದ ಬಾಕಿ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತದೆ. |

| | | |
|---|---|---|
| ಆ) | ಸದರಿ ಪ್ರಕರಣಗಳು ದೀರ್ಘಕಾಲದಿಂದ ಬಾಕಿ ಇರಲು ಕಾರಣಗಳೇನು; (ವಿವರ ಗಳೊಡನೆ ಮಾಹಿತಿ ನೀಡುವುದು) | **ಭೂಮಂಜೂರಿ(ದರಖಾಸ್ತು) ಪೋಡಿ ಪ್ರಕರಣಗಳ ವಿಲೇವಾರಿ ವಿಳಂಬಕ್ಕೆ ಕಾರಣಗಳು**<br>1) ಆಕಾರಬಂದು & ಪಹಣಿ ವಿಸ್ತೀರ್ಣ ವ್ಯತ್ಯಾಸಗಳಿರುವುದು.<br>2) ಪಹಣಿ ಕಾಲಂ.3 & 9ರಲ್ಲಿ ವಿಸ್ತೀರ್ಣದ ವ್ಯತ್ಯಾಸ ಗಳಿರುವುದು.<br>3) ಪಹಣಿ ತಿದ್ದುಪಡಿ ಮಾಡಲು ಅವಶ್ಯಕವಾದ ಹಿಂದಿನ ಕಂದಾಯ ದಾಖಲೆಗಳು (ಮ್ಯುಟೇಷನ್, ಪಹಣಿ, ಮಂಜೂರಿ ಆದೇಶ-ಇತರೆ) ಲಭ್ಯವಾಗದಿರುವುದು.<br>4) ಭೂಮಂಜೂರಾತಿ ಪ್ರಕರಣಗಳಲ್ಲಿ ಸರ್ಕಾರದ ಸೂಚನೆಗಳ ನ್ವಯ ನಮೂನೆ 1 ರಿಂದ 5 ಭರ್ತಿ ಮಾಡುವಲ್ಲಿ ಮಂಜೂರಾತಿ ದಾಖಲೆ ಲಭ್ಯವಾಗದೇ ಇರುವುದು.<br>5) ಭೂಮಂಜೂರಾತಿ ಪ್ರಕರಣಗಳಲ್ಲಿ ಮಂಜೂರಿ ಮತ್ತು ಅನುಭವ ವಿಸ್ತೀರ್ಣಗಳಲ್ಲಿ ವ್ಯತ್ಯಾಸ ಇರುವುದು, ಆಕಾರ ಬಂದಿನ ವಿಸ್ತೀರ್ಣಕ್ಕಿಂತ ಹೆಚ್ಚಿನ ಕ್ಷೇತ್ರಕ್ಕೆ ಮಂಜೂರಿ ಆದೇಶ ಮಾಡಿರುವುದರಿಂದ ಪಹಣಿ ಸರಿಪಡಿಸುವಲ್ಲಿ ತೊಂದರೆ ಇರು ವುದು ಇತ್ಯಾದಿ.<br>6) ಜಮೀನಿನ ಮೂಲ ಭೂದಾಖಲೆಗಳು/ಕಂದಾಯ ದಾಖಲೆ ಗಳು ಶಿಥಿಲವಾಗಿದ್ದು, ಅವುಗಳ ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವಕಾಶ ಬೇಕಾಗುವುದು.<br>7) ಅಳತೆ ವೇಳೆ ಜಮೀನಿನ ಹಕ್ಕು & ಗಡಿ ವಿಚಾರದಲ್ಲಿ ತಕರಾರು ಮತ್ತು ನ್ಯಾಯಾಲಯದಲ್ಲಿ ವಿವಾದಗಳಿರುವುದರಿಂದ.<br>ಮುಂತಾದ ಕಾರಣಗಳಿಂದ, ದರಖಾಸ್ತು ಪೋಡಿ ಪ್ರಕರಣಗಳಲ್ಲಿ ಶೀಘ್ರವಾಗಿ ಪೋಡಿ ದುರಸ್ತಿ ಕಾರ್ಯಗಳನ್ನು ನಿರ್ವಹಿಸಲು ಸಾದ್ಯವಾಗುತ್ತಿಲ್ಲ. |
| ಇ) | ಯಾವ ಕಾಲಮಿತಿಯಲ್ಲಿ ಸದರಿ ಪ್ರಕರಣ ಗಳನ್ನು ಇತ್ಯರ್ಥಪಡಿಸಲಾಗುವುದು? | "ಅ" ರಲ್ಲಿ ಉತ್ತರ ಒದಗಿಸಿದೆ. |

**<u>ಸಂಖ್ಯೆ: ಕಂಇ 15 ಎಸ್‌ಎಸ್‌ಸಿ 2024</u>**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು